ಸಹಾಯಧನ ಹೆಚ್ಚಳ

193(547) ಶ್ರೀ ಯು ಟಿ ಖಾದರ್:(ಮಂಗಳೂರು) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಿಂದ ಅಗತ್ಯವಾದ ಯಂತ್ರೋಪಕರಣಗಳಿಗೆ ನೀಡುತ್ತಿರುವ ಸಹಾಯಧನವು ಕಡಿಮೆಯಾಗಿದ್ದು ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತಿದೆ, ಈ ಆರ್ಥಿಕ ವರ್ಷದಲ್ಲಿಯೇ ಸಹಾಯಧನವನ್ನು ಹೆಚ್ಚಿಸಲಾಗುವುದೇ?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) –ಇಲ್ಲ–

ಆ) ಪ್ರಸಕ್ತ ತೋಟಗಾರಿಕೆ ಇಲಾಖೆಯಿಂದ ಶೇ.50ರಷ್ಟು ಸಹಾಯಧನವನ್ನು ರೂ.50,000/– ಕ್ಕೆ ಮಿತಿಗೊಳಿಸಿ ಫಲಾನುಭವಿ ರೈತರು ಕೊಂಡ ಯಂತ್ರಗಳಿಗೆ ಸಹಾಯಧನವೆಚಿದು ನೀಡಲಾಗುತ್ತಿದೆ. ಅಡಿಕೆ ಸುಲಿಯುವ ಸಹಾಯಧನದ ಮಿತಿಯನ್ನು 2010–11ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ.50,000/–ರಿಂದ ರೂ.1,00,000/–ಕ್ಕೆ ಹೆಚ್ಚಿಸಲಾಗಿದೆ.

ಎ ಡಿ ಬಿ ಯೋಜನೆ

194(548) ಶ್ರೀ ಯು ಟಿ ಖಾದರ್:(ಮಂಗಳೂರು) ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಳ್ಳಾಲದ ಕಡಲ ಕೊರತ ಶಾಶ್ವತವಾಗಿ ಬಗೆಹರಿಸುವ ಸಂಬಂಧದಲ್ಲಿ ಯೋಜನೆಚಿುನ್ನು ಅನುಷ್ಠಾನಗೊಳಿಸಲು ಕಛೇರಿ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಈ ಕಛೇರಿಯನ್ನು ಪ್ರಾರಂಭಿಸಲಾಗುವುದು.

2) ADB ಯೋಜನೆಯು ಪ್ರಾರಂಭ ಆಗುವವರೆಗೆ ಸಮುದ್ರ ತಡೆಯಲ್ಲಿ ವಾಸಮಾಡುತ್ತಿರುವ ಮೀನುಗಾರರ ಹಾಗೂ ಜನ ಸಾಮಾನ್ಯರ ರಕ್ಷಣೆಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜೆ ಕೃಷ್ಣ ಪಾಲೇಮಾರ್(ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):

1) ಉಳ್ಳಾಲದಲ್ಲಿ ಕಡಲ ಕೊರೆತ ನಿಯಂತ್ರಿಸುವ ಸಲುವಾಗಿ A.D.B. ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನಾ ನಿರ್ವಹಣಾ ಘಟಕವನ್ನು (P.M.U) ಮಂಗಳೂರು ಕೇಂದ್ರ ಸ್ಥಾನದಲ್ಲಿ ಸರ್ಕಾರದ ಆದೇಶ ಸಂಖ್ಯೆ PWD 178 PSP 2009, Dated 26.12.2009ರ ಪ್ರಕಾರ ಸ್ಥಾಪಿಸಲಾಗಿರುತ್ತದೆ. ಸದರಿ ಯೋಜನಾ ಘಟಕಕ್ಕೆ ಸಧ್ಯಕ್ಕೆ ಖಾಯಂ ಅಧಿಕಾರಿಗಳನ್ನು ನೇಮಿಸಿರುವುದಿಲ್ಲ. ಆದರೆ ಇಲಾಖೆಯಲ್ಲಿ ಲಭ್ಯವಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಈ ಸಂಬಂಧ ಕರ್ತವ್ಯ ನಿರ್ವಹಿಸುವ ಬಗ್ಗೆ ಮುಂದಿನ ಆದೇಶದವರೆಗೆ ತಾತ್ಕಾಲಿಕ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

2) ADB ಯೋಜನೆಯು ಪ್ರಾರಂಭವಾಗುವವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಮೀನುಗಾರರ ಹಾಗೂ ಜನ ಸಾಮಾನ್ಯರಿಗೆ ಸಮುದ್ರ ಕೊರೆತದಿಂದ ಆಗಬಹುದಾದ ಅನಾಹುತಗಳನ್ನು ತಪ್ಪಿಸಲು ತುರ್ತು ಸಂರಕ್ಷಣಾ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಉಳ್ಳಾಲದ ಕೈಕೋ, ಮುಕ್ಕಚ್ಚೇರಿ ಮತ್ತು ಹಿಲಾರಿ ನಗರ ಪ್ರದೇಶಗಳಲ್ಲಿ ತುರ್ತು ಸಂರಕ್ಷಣೆ ಕಾಮಗಾರಿ ಕೈಗೊಳ್ಳಲು ಇಲಾಖಾ ಅನುದಾನದಿಂದ ರೂ. 30.00 ಲಕ್ಷಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ ಪ್ರದೇಶಗಳಿಗೆ ಸಮುದ್ರ ಕೊರೆತದ ತೀವ್ರತೆಗನುಗುಣವಾಗಿ ಸಂರಕ್ಷಣೆ ಕಾಮಗಾರಿಯನ್ನು ಇಲಾಖೆಯ / ಜಿಲ್ಲಾಡಳಿತದ ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು.

ಎ ಪಿ ಎಮ್ ಸಿ ಯಾರ್ಡ್‌ನಲ್ಲಿ ವ್ಯಾಪಾರಸ್ಥರ ಮೇಲೆ ಹಾಕಿರುವ ಮೊಕದ್ದಮೆಗಳು